# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀಮತಿ ಆರ್.ಹೆಚ್.ನದಾಫ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇವೂರ ಗ್ರಾಮ ಪಂಚಾಯತಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ಶಿಫಾರಸ್ಸಿನನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 590 ಗ್ರಾಪಂಕಾ 2016, ದಿನಾಂಕ 19.10.2016
2) ಮಾನ್ಯ ಉಪಲೋಕಾಯುಕ್ತ ರವರ ವರದಿ ಸಂಖ್ಯೆ: ಉಪಲೋಕ್-1/ಡಿಇ/571/2016/ಎಆರ್‌ಇ-9, ದಿನಾಂಕ 04.11.2017

ಪ್ರಸ್ತಾವನೆ:

ಮೇಲೆ ಓದಲಾದ (1) ರಲ್ಲಿ ಶ್ರೀಮತಿ ಆರ್.ಹೆಚ್.ನದಾಫ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇವೂರ ಗ್ರಾಮ ಪಂಚಾಯತಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಅದರಂತೆ ಅಪರ ನಿಬಂಧಕರು ವಿಚಾರಣೆಗಳು-9, ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

> "ನೀವು ಎಂದರೆ ಆಪಾದಿತ ಸರ್ಕಾರಿ ನೌಕರ ಆದ ಶ್ರೀಮತಿ ಆರ್.ಹೆಚ್.ನದಾಫ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇವೂರ ಗ್ರಾಮ ಪಂಚಾಯತಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ ಇವರು ರೇಣುಕಾ ಗಂಡ ಮಲ್ಲಿಕಾರ್ಜುನ ಚಲವಾದಿ ಮತ್ತು ಲಕ್ಷ್ಮಿಬಾಯಿ ಮಾದರ್. ಹುಲಿಗೆವ್ವ ಮಾದರ್, ರೇಖಾ ಛಲವಾದಿಯವರು ತಮ್ಮ ಹೇಳಿಕೆಯಲ್ಲಿ ನಿವೇಶನ ಪಡೆಯಲು ಬಾಲನಗೌಡ ಇವರಿಗೆ ಹಣ ನೀಡಿದ್ದು ನಿವೇಶನ ನೀಡಿಲ್ಲವೆಂದು ಹೇಳಿದ ಮೇರೆಗೆ ನೀವು ಖಾಸಗಿ ವ್ಯಕ್ತಿಗಳ ಮೂಲಕ ಅಕ್ರಮವಾಗಿ ಹಣ ಸಂಗ್ರಹಣೆ ಮಾಡುತ್ತೀರೆಂದು ಕಂಡು ಬರುತ್ತದೆ. ಆದ್ದರಿಂದ, ನೀವು ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(i)ರಿಂದ (iii) ರಡಿಯಲ್ಲಿ ದುರ್ನಡತೆಯನ್ನಸಗಿದ್ದೀರಿ"

ಪ್ರಕರಣದ ಸಂಬಂಧ ವಿಚಾರಣೆ ನಡೆಸಿ ಮೇಲೆ ಓದಲಾದ (2) ರಲ್ಲಿ, ತನಿಖಾಧಿಕಾರಿಗಳು ಆಪಾದಿತರ ಮೌಖಿಕ ಹೇಳಿಕೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿ, ಶ್ರೀಮತಿ ಆರ್.ಹೆಚ್.ನದಾಫ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇವೂರ ಗ್ರಾಮ ಪಂಚಾಯತಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸಲು ವಿಫಲರಾಗಿದ್ದು, ತನಿಖಾ ವರದಿಯನ್ನು ಪರಿಶೀಲಿಸಲಾಗಿ ಸದರಿ ನೌಕರರ ವಿರುದ್ಧ ಆರೋಪ ಸಾಬೀತುಪಡಿಸಲು ಯಾವುದೇ ಕಾರಣಗಳು ಇರುವುದಿಲ್ಲವೆಂದು ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿ ತಿಳಿಸಿರುತ್ತಾರೆ. ಆದುದರಿಂದ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀಮತಿ ಆರ್.ಹೆಚ್.ನದಾಫ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇವೂರ ಗ್ರಾಮ ಪಂಚಾಯತಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ಆರೋಪಗಳು ಸಾಬೀತಾಗದೇ ಇರುವ ಹಿನ್ನೆಲೆಯಲ್ಲಿ, ಸದರಿಯವರನ್ನು ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ಲೋಕಾಯುಕ್ತ ಪ್ರಕರಣದಲ್ಲಿ ನಿರಪರಾಧಿಯನ್ನಾಗಿ ಆದೇಶ ಹೊರಡಿಸಲು ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುತ್ತಾರೆ.

ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಶ್ರೀಮತಿ ಆರ್.ಹೆಚ್.ನದಾಫ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇವೂರ ಗ್ರಾಮ ಪಂಚಾಯತಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ಆರೋಪಗಳು ಸಾಬೀತಾಗದಿರುವ ಬಗ್ಗೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸಂಕ್ಷಿಪ್ತ ಅಂಶಗಳು ಕೆಳಗಿನಂತಿವೆ.

"Considering the evidence there is no material evidence to prove that the DGO receiving the bribe or unauthorised amount from Smt. Renuka w/o Mallikarjun Chaluwadi, Smt.Lakshmibai Madar, Huligevva Madar, Rekha Chaluwadi,. The DGO herself examised as DW.1, she also specifically denying the fact that she has received Rs.10,000/- by the abive said persons through the third person. Disciplinary Authority produced the Ex.P3 with 34 sheets. In the said documents the Xerox copy of the statement of Smt.Renuka Gyanappa Chaluwadi, Smt.Lakshmibai Gyanappa Madar, Smt.Sridevi Kanakappa Madar, Smt.Huligevva Gumputrappa, Smt.Chandrabai Dalabanjan Chaluwadi, Smt.Renuka Mallikarju.

Persued the said alleged statement there is no recitals in the said statements regarding the fact that the said statement given before whom. Further to prove the alleged statement no one said person examined by the Disciplinary Authority. As per the endorsement issued by the Police Inspector. Karnataka Lokayukta, Bagalakote dated 15.12.2014 to the complainant. There is no material evidence to prove the DGO collect the inauthorised amount or bribe from any beneficiaries as stated in the complaint.

Considering all the above said oral evidence of the Pw.1 and documentary evidence, there is no sufficient material and evidence on record to show that she received or collect unauthorized amount from the alleged beneficiaries as charge leveled against the DGO.

In the event of the circumstances, the charges leveled against the DGO is not proved."

ಸರ್ಕಾರವು ಪರಿಶೀಲಿಸಿ, ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಶ್ರೀಮತಿ ಆರ್.ಹೆಚ್.ನದಾಫ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇವೂರ ಗ್ರಾಮ ಪಂಚಾಯತಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ಆರೋಪಗಳು ಸಾಬೀತಾಗದಿರುವ ಬಗ್ಗೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಶ್ರೀಮತಿ ಆರ್.ಹೆಚ್.ನದಾಫ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇವೂರ ಗ್ರಾಮ ಪಂಚಾಯತಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ಆರೋಪಗಳು ಸಾಬೀತಾಗದೇ ಇರುವ ಹಿನ್ನೆಲೆಯಲ್ಲಿ, ಸದರಿಯವರನ್ನು ಸದರಿ ಲೋಕಾಯುಕ್ತ ಪ್ರಕರಣದಲ್ಲಿ ನಿರಪರಾಧಿಯನ್ನಾಗಿ ಆದೇಶಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 590 ಗ್ರಾಪಂಕಾ 2016, ಬೆಂಗಳೂರು, ದಿನಾಂಕ: 03.04.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಬಾಗಲಕೋಟೆ ತಾಲ್ಲೂಕು ಬೇವೂರ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸರ್ಕಾರಿ ನಿವೇಶನ ಹಂಚಿಕೆ ಮಾಡಲು ಖಾಸಗಿ ವ್ಯಕ್ತಿಗಳ ಮೂಲಕ ಅಕ್ರಮವಾಗಿ ಹಣ ಸಂಗ್ರಹಣೆ ಮಾಡಿರುತ್ತಾರೆಂದು ಲೋಕಾಯುಕ್ತ ಸಂಸ್ಥೆಗೆ ಸಲ್ಲಿಕೆಯಾದ ದೂರಿನ ಸಂಬಂಧ ಆರೋಪಗಳು ಸಾಬೀತಾಗದೇ ಇರುವ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನನ್ವಯ ಸದರಿ ಲೋಕಾಯುಕ್ತ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀಮತಿ ಆರ್.ಹೆಚ್.ನದಾಫ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇವೂರ ಗ್ರಾಮ ಪಂಚಾಯತಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ ಇವರನ್ನು ನಿರಪರಾಧಿಯನ್ನಾಗಿ ಪರಿಗಣಿಸಿ, ಸದರಿ ಪ್ರಕರಣದಲ್ಲಿ ದೋಷಮುಕ್ತರನ್ನಾಗಿ ಮಾಡಿ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

4/4/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬಾಗಲಕೋಟೆ ಜಿಲ್ಲಾ ಪಂಚಾಯತಿ, ಬಾಗಲಕೋಟೆ.
5) ಕಾರ್ಯನಿರ್ವಾಹಕ ಅಧಿಕಾರಿ, ಬಾಗಲಕೋಟೆ ತಾಲ್ಲೂಕು ಪಂಚಾಯತಿ, ಬಾಗಲಕೋಟೆ.
(ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
6) ಶ್ರೀಮತಿ ಆರ್.ಹೆಚ್.ನದಾಫ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬೇವೂರ ಗ್ರಾಮ ಪಂಚಾಯತಿ, ಬಾಗಲಕೋಟೆ ತಾಲ್ಲೂಕು ಮತ್ತು ಜಿಲ್ಲೆ.
7) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.